# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 809 |
| 2. | ಮಾನ್ಯ ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | : | 19.08.2025 |
| 4. | ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |

****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆ ಬೀದರ್ ನಗರದ ಗಾಂಧಿಗಂಜ್ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣವು ರೈತರು ಬೆಳದ ಬೆಳೆಗಳನ್ನು ಮಾರಾಟ ಮಾಡಲು ಮತ್ತು ವಾಹನಗಳಿಗೆ ಸ್ಥಳಾವಕಾಶ ಸಮಸ್ಯೆಯಿಂದ ವಾಹನ ಗಳಲ್ಲಿ ತುಂಬಿದ ಬೆಳೆಗಳನ್ನು ಇಳಿಸಲಾಗದೆ ಮತ್ತು ಇತರೇ ಮೂಲಭೂತ ಸೌಕರ್ಯವಿಲ್ಲದೇ ರೈತರಿಗೆ ಸಾಕಷ್ಟು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು; | - ಬಂದಿದೆ-<br>ಬೀದರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು 39.28 ಎಕರ ವಿಸ್ತೀರ್ಣದಲ್ಲಿ ಪ್ರಾಂಗಣವನ್ನು ಹೊಂದಿದ್ದು, ರೈತರು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ಬಂದಂತಹ ವಾಹನಗಳನ್ನು ಆಯಾ ದಲ್ಲಾಲರು ಹಾಗೂ ಖರೀದಿದಾರರ ಅಂಗಡಿಗಳಲ್ಲಿ ಖಾಲಿ ಮಾಡಿದ ನಂತರ ಖಾಲಿ ವಾಹನಗಳಿಗೆ ಮುಖ್ಯ ಮಾರುಕಟ್ಟೆ ಪ್ರಾಂಗಣದ ಆಡಳಿತ ಕಚೇರಿಯ ಸುತ್ತ-ಮುತ್ತ ಸ್ಥಳಾವಕಾಶ ಕಲ್ಪಿಸಲಾಗಿದೆ.<br>ರೈತರಿಗೆ ಮೂಲಭೂತ ಸೌಕರ್ಯಗಳಾದ ರೈತಭವನ, ಶುದ್ಧ ಕುಡಿಯುವ ನೀರಿನ ಘಟಕ, ಶೌಚಾಲಯ, ದಾರಿದೀಪ, ರಸ್ತೆ ಚರಂಡಿ, ರೈತರ ಧಾನ್ಯ ಮಳೆಯಿಂದ ಹಾಳಾಗದಂತೆ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮುಚ್ಚು ಹರಾಜು ಕಟ್ಟೆ, ಮೇಲ್ಛಾವಣಿ ಇತರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. |
| ಆ) | ಸದರಿ ಮಾರುಕಟ್ಟೆಯಲ್ಲಿ ರಸ್ತೆಯ ಜಾಗದಲ್ಲಿ ಅತಿಕ್ರಮಿಸಿಕೊಂಡು ಮಳಿಗೆಯನ್ನು ನಿರ್ಮಿಸಿ ಮಾರುಕಟ್ಟೆ ಸ್ವರೂಪ ಬದಲಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮವೇನು? | -ಇಲ್ಲ- |
| ಇ) | ಗಾಂಧಿಗಂಜ್ ಕೃಷಿ ಉತ್ಪನ್ನ ಮಾರುಕಟ್ಟೆ ಬೇರೆ ಕಡೆ ಸ್ಥಳಾಂತರಿಸುವ ಕುರಿತು ಸರ್ಕಾರ ಕ್ರಮವಹಿಸುವುದೆ? (ಮಾಹಿತಿ ನೀಡುವುದು) | ಬೀದರ ಕೃಷಿ ಉತ್ಪನ್ನ ಮಾರುಕಟ್ಟೆಯು ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳ ಗಡಿ ಭಾಗದಲ್ಲಿದ್ದು, ಆವಕದ ಪ್ರಮಾಣ ಮತ್ತು ವರ್ತಕರ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಪ್ರಾಂಗಣದ ವಿಸ್ತರಣೆಗಾಗಿ 100 ಎಕರೆ ಜಾಗವನ್ನು ಮಂಜೂರು ಮಾಡಿ ಕೊಡಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರನ್ನು, ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ರವರ ದಿನಾಂಕ: 06.06.2025ರ ಪತ್ರದಲ್ಲಿ ಕೋರಲಾಗಿರುತ್ತದೆ. |

**ಸಂಖ್ಯೆ: ಸಿಒ 193 ಎಂಆರ್‌ಇ 2025**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು.